


ಕರುಣಾಮೂರ್ತಿ ವಳ್ಳಲಾರ್
ಕಥೆ: ತಂಗವೇಲು ಎಸ್.ಆರ್.
ಚಿತ್ರ: ಅಲೀ
1
ಸುಮಾರು ನೂರು ವರ್ಷಗಳ ಹಿಂದೆ, ಒಬ್ಬ ತಹಸೀಲ್ದಾರ ವಡಲೂರಿಗೆ ಒಂದು ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ.
ಓಹೋ! ಎತ್ತುಗಳೇ ಬೇಗ ಓಡಿ.
ಅಯ್ಯೋ, ಅವು ನಿಧಾನವಾಗುತ್ತಿವೆ. ಬೇಗ ಓಡಿಸು.
2
ಸ್ವಲ್ಪ ದೂರ ಹೋದ ನಂತರ...
3
ದೂರದಲ್ಲಿ ಒಂದು ಕೊಳ ಕಣ್ಣಿಗೆ ಬಿದ್ದಿತು.
ಎತ್ತುಗಳು ತುಂಬಾ ಬಳಲಿವೆ. ಅವುಗಳಿಗೆ ನೀರು ಕುಡಿಸಿ, ಸ್ವಲ್ಪ ವಿಶ್ರಾಂತಿ ಪಡೆದ ನಂತರ ಮತ್ತೆ ಹೊರಡೋಣ.
ಈಗ ಅದಕ್ಕೆಲ್ಲಾ ಸಮಯವಿಲ್ಲ. ಆಮೇಲೆ ನೋಡೋಣ. ಬೇಗ ನಡೆ.
4
ಮತ್ತೆ ಸ್ವಲ್ಪ ಸಮಯದ ನಂತರ...
ಎತ್ತುಗಳು ಪಾಪ ತುಂಬಾ ದಣಿದಿವೆ. ಮರದ ಕೆಳಗೆ ನಿಲ್ಲಿಸಿ ಅವುಗಳಿಗೆ ಸ್ವಲ್ಪ ವಿಶ್ರಾಂತಿ ಕೊಡೋಣ.
ನಮಗೆ ಸಮಯವೇ ಇಲ್ಲ. ಇಂದು ರಾತ್ರಿಯೇ ನಾವು ಮತ್ತೆ ಹಿಂದಿರುಗಬೇಕಾಗಿದೆ. ಸ್ವಾಮೀಜಿಯವರನ್ನು ಕಾಣುವ ವರೆಗೂ ವಿಶ್ರಾಂತಿ ಪಡೆಯುವ ಹಾಗಿಲ್ಲ.
5
ಕೊನೆಗೆ ಅವರ ವಡಲೂರನ್ನು ತಲುಪಿದರು. ಅಲ್ಲಿ ಮಹಾತ್ಮ ವಳ್ಳಲಾರರು ಪ್ರವಚನ್ನನೀಡುತ್ತಿದ್ದರು.
6
ತಹಸೀಲ್ದಾರರು ವಳ್ಳಲಾರರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ನಮ್ರತೆಯಿಂದ ಕುಳಿತರು.
7
ಗಾಡಿಯವನು ಎತ್ತುಗಳನ್ನು ಬಿಚ್ಚಿ ಮನೆಯ ಹಿತ್ತಲಿಗೆ ಕರೆದುಕೊಂಡು ಹೋದ. ವಳ್ಳಲಾರರು ಅದನ್ನು ಗಮನಿಸುತ್ತಿದ್ದರು.


ಸಾಧಾರಣವಾಗಿ ವಳ್ಳಾರರು ಪ್ರವಚನ ಮಧ್ಯೆ ಏಳುತ್ತಿರಲಿಲ್ಲ. ಆದರೆ ಇಂದು ಹಠಾತ್ತನೆ ಮೇಲೆದ್ದರು.
8
ಏನು ಆಶ್ಚರ್ಯ!
ಏನಾಯಿತು? ಅವರು ಏಕೆ ಎದ್ದು ಹೊರಟರು?
ಬಹಳ ಕಾಲವಾದರೂ ಹಿಂದಿರುಗಿ ಬರಲಿಲ್ಲ. ಭಕ್ತರಿಗೆಲ್ಲಾ ಕುತೂಹಲವಾಯಿತು.
9
ನಾವೇ ಹೋಗಿ ನೋಡೋಣ.
ನಾನೂ ಬರುತ್ತೇನೆ.
ಅವರು ಹಿತ್ತಲಿಗೆ ಹೋದಾಗ ......
10
ಓ, ನನ್ನಿಂದಾಗಿ ನಿಮಗೆ ತುಂಬಾ ತೊಂದರೆಯಾಯಿತು. ನಿಮಗೆ ಬಹಳ ಹಿಂಸೆ ಕೊಟ್ಟಿದ್ದಾರೆ.
11
ಓ, ಸ್ವಾಮೀಜಿ ಕಣ್ಣೀರು ಸುರಿಸುತ್ತಿದ್ದಾರೆ.
ಅದನ್ನು ಕೇಳಿ ತಹಸೀಲ್ದಾರ ಅವರ ಬಳಿಗೆ ಓಡಿದ.
12
ದಯವಿಟ್ಟು ನನ್ನನ್ನು ಕ್ಷಮಿಸಿ. ಇದಕ್ಕೆಲ್ಲಾ ನಾನೇ ಕಾರಣ.
ಒಂದು ಹೂವಿಗೆ ನೋವಾದರೂ ಅವರಿಂದ ಸಹಿಸಲಾಗದು. ಇಂತಹ ಮೂಕಪ್ರಾಣಿ ಕಷ್ಟ ಅನುಭವಿಸಿದರೆ ಅವರಿಂದ ತಡೆದುಕೊಳ್ಳಲು ಆಗುತ್ತದೆಯೇ ?
ಇನ್ನೊಬ್ಬರ ಸಂಕಷ್ಟಕ್ಕೆ ಸ್ಪಂದಿಸುವುದೇ ನಿಮ್ಮ ಜೀವನ. ಅದನ್ನರಿಯದೆ ನಾನು ಮೂರ್ಖತನ ಮಾಡಿದೆ.
13
ಎತ್ತುಗಳನು ಪ್ರೀತಿಯಿಂದ ಸವರುತ್ತಾ ಸ್ವಾಮೀಜಿ ಕಣ್ಣೀರು ಸುರಿಸುತ್ತಿದ್ದರು. ತಹಸೀಲ್ದಾರನೂ ತನ್ನ ತಪ್ಪಿಗಾಗಿ ವೇದನೆಪಟ್ಟು ಕಣ್ಣೀರು ಸುರಿಸಿದ.
ವಳ್ಳಲಾರರು ಎತ್ತುಗಳಿಗೆ ಮೇಯಲು ಹುಲ್ಲು ಹಾಗೂ ಕುಡಿಯಲು ನೀರಿನ ವ್ಯವಸ್ಥೆ ಮಾಡಿ ಹಿಂದಿರುಗಿದಾಗ...
ಜ್ಯೋತಿ ರಾಮಲಿಂಗ ಸ್ವಾಮಿಗಳಿಗೆ ಜಯವಾಗಲಿ.
ಕರುಣಾಮೂರ್ತಿ ವಳ್ಳಲಾರರಿಗೆ ಜಯವಾಗಲಿ.
14
ಹೇ ಭಗವಂತ! ನೀನು ಎಲ್ಲ ಜೀವಿಗಳಲ್ಲೂ ಇದ್ದೀಯ.
15